**ಕರ್ನಾಟಕ ಸರ್ಕಾರ**

***ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.***

ಸಂಖ್ಯೆ: ಪಪೂಶಿ/ಶೈಶಾ-04/ತ.ಕು 03/1/2017-18 ದಿನಾಂಕ: -09-2017.

## ಸುತ್ತೋಲೆ

ವಿಷಯ: 2017-18ನೇ ಶೈಕ್ಷಣಿಕ ಸಾಲಿಗೆ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಆಂಗ್ಲ ಭಾಷಾ ವಿಷಯದಲ್ಲಿ ವ್ಯಾಕರಣ ಹಾಗೂ ಮಾತನಾಡುವ ಕೌಶಲವನ್ನು ಉತ್ತಮಗೊಳಿಸುವ ವಿಶೇಷ ತರಗತಿಗಳನ್ನು ಹಮ್ಮಿಕೊಳ್ಳುವ ಬಗ್ಗೆ.

ಉಲ್ಲೇಖ: 1. ಸರ್ಕಾರ ಆದೇಶ ಸಂಖ್ಯೆ: ಇಡಿ185 ಯೋಸಕ 2017, ಬೆಂಗಳೂರು ದಿನಾಂಕ: 07-07-2017.

2. ಈ ಕಛೇರಿ ಪತ್ರ ಸಂಖ್ಯೆ: ಪಪೂಶಿ/ಶೈಶಾ-04/ತ.ಕು-03/2017-18, ದಿನಾಂಕ: 20-07-2017.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಪದವಿ ಪೂರ್ವ ಶಿಕ್ಷಣ ಇಲಾಖೆಯು, 2017-18ನೇ ಶೈಕ್ಷಣಿಕ ಸಾಲಿನಿಂದ ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರಥಮ ಮತ್ತು ದ್ವಿತೀಯ ಪಿಯುಸಿ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪ್ರತಿ ಭಾನುವಾರದ ರಜಾ ದಿನಗಳಂದು ಆಂಗ್ಲ ಭಾಷಾ ವಿಷಯದಲ್ಲಿ ವ್ಯಾಕರಣ ಹಾಗೂ ಮಾತನಾಡುವ ಕೌಶಲವನ್ನು ಉತ್ತಮಗೊಳಿಸಲು ವಿಶೇಷ ತರಗತಿಗಳನ್ನು ಉಲ್ಲೇಖ(1)ರ ಸರ್ಕಾರ ಆದೇಶದಂತೆ ಈಗಾಗಲೇ ರಾಜ್ಯಾದ್ಯಂತ ಹಮ್ಮಿಕೊಳ್ಳಲಾಗಿದೆ. ವಿಶೇಷ ತರಗತಿಗೆ ಸಂಬಂಧಿಸಿದಂತೆ, ಕಾರ್ಯಕ್ರಮದ ರೂಪರೇಷೆಗಳನ್ನು ಉಪನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ, ರವರುಗಳ ಜವಾಬ್ದಾರಿಗಳನ್ನು ಒಳಗೊಂಡ ಮಾಹಿತಿಯನ್ನು ಉಲ್ಲೇಖ(2)ರ ಸುತ್ತೋಲೆಯಲ್ಲಿ ತಿಳಿಸಲಾಗಿದೆ.

1) **ಹೆಚ್ಚುವರಿ ಬಯೋಮೆಟ್ರಿಕ್ ಯಂತ್ರಗಳ ಖರೀದಿ, ದಾಸ್ತಾನಿಗೆ ಪಡೆಯುವುದು ಹಾಗೂ ಬಳಕೆ:-**

ಉಲ್ಲೇಖಿತ ಸುತ್ತೋಲೆಗಳಲ್ಲಿ ಪ್ರತಿ ಜಿಲ್ಲಾ/ತಾಲ್ಲೂಕು/ಹೋಬಳಿ ನೋಡಲ್ ಕಾಲೇಜಿನಲ್ಲಿ ನಡೆಯುವ ತರಬೇತಿಯಲ್ಲಿ ಪಾಲ್ಗೊಳ್ಳುವ ವಿದ್ಯಾರ್ಥಿಗಳ ಹಾಜರಾತಿಯನ್ನು ಕಡ್ಡಾಯವಾಗಿ ಬಯೋಮೆಟ್ರಿಕ್‌ನಲ್ಲಿ ಪಡೆದು ಕೂಡಲೆ ಮಾಹಿತಿಯನ್ನು ಕೇಂದ್ರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿತ್ತು. ಆದರೆ ಬಯೋಮೆಟ್ರಿಕ್ ಯಂತ್ರಗಳ ಕೊರತೆ ಹಾಗೂ ತಂತ್ರಾಂಶದ ತೊಂದರೆಯಿಂದ ಹಾಜರಾತಿ ನಮೂದಿಸಲು ಸಾದ್ಯವಾಗುತ್ತಿಲ್ಲವೆಂದು ಕೆಲವು ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ರವರು ವರದಿ ಮಾಡಿರುತ್ತಾರೆ. ಈ ಹಿನ್ನೆಲೆಯಲ್ಲಿ ಈಗಾಗಲೇ ಹಿಂದಿನ ವರ್ಷದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳ ದಸರಾ ರಜೆಯ ವಿಶೇಷ ತರಗತಿಗಾಗಿ ಇಲಾಖೆಯಿಂದಲೇ ಎಲ್ಲಾ ಜಿಲ್ಲೆಗಳಿಗೂ ಆಯಾ ಜಿಲ್ಲೆಯಲ್ಲಿರುವ ಒಟ್ಟು ತಾಲ್ಲೂಕುಗಳ ಸಂಖ್ಯೆಯ ಜೊತೆ ಇನ್ನೊಂದು ಹೆಚ್ಚುವರಿ ಯಂತ್ರವನ್ನು ನೀಡಲಾಗಿತ್ತು. ಸದರಿ ಯಂತ್ರಗಳನ್ನು ಬಳಸಿಕೊಳ್ಳುವುದು. ಕೆಲವು ಜಿಲ್ಲೆಗಳಲ್ಲಿ ಹೋಬಳಿ ಮಟ್ಟದಲ್ಲಿ ಹೆಚ್ಚುವರಿ ಕೇಂದ್ರಗಳನ್ನು ತೆರೆದಿರುವ ಕಾರಣ ಹೆಚ್ಚುವರಿ ಬಯೋಮೆಟ್ರಿಕ್ ಯಂತ್ರಗಳ ಅವಶ್ಯಕತೆ ಇರುತ್ತದೆ. ಅಲ್ಲದೆ 100ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಇತರೆ ಕಾಲೇಜುಗಳಿಂದ ಮತ್ತೊಂದು ತರಬೇತಿ ಕೇಂದ್ರಕ್ಕೆ ನಿಯೋಜನೆಗೊಂಡಿದ್ದರೆ ಅಂತಹ ವಿದ್ಯಾರ್ಥಿಗಳ ಹಾಜರಾತಿ ದಾಖಲಿಸಲು ಸಂಬಂಧಿಸಿದ ಪ್ರಾಚಾರ್ಯರು ಬಯೋಮೆಟ್ರಿಕ್ ಯಂತ್ರವನ್ನು ಸಂಬಂಧಿಸಿದ ಜಿಲ್ಲಾ ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ರವರ ಲಿಖಿತ ಅನುಮತಿ ಮೇರೆಗೆ KTPP

ನಿಯಮಗಳ ಅನುಸಾರ ಕಾಲೇಜಿನ ಸಂಚಿತ ನಿಧಿಯಿಂದ ಖರೀದಿಸಿ, ದಾಸ್ತಾನಿಗೆ ಪಡೆದು ತರಬೇತಿ ಕೇಂದ್ರದಲ್ಲಿ ಅಳವಡಿಸುವುದು. ತರಬೇತಿ ಕಾರ್ಯಕ್ರಮ ಪೂರೈಸಿದ ನಂತರ ಬಯೋ ಮೇಟ್ರಿಕ್ ಯಂತ್ರವನ್ನು ತರಬೇತಿ ಕೇಂದ್ರಗಳಿಂದ ಮರಳಿ ಪಡೆದು, ಸಂಬಂಧಿಸಿದ ಕಾಲೇಜಿನಲ್ಲಿ ಸಂರಕ್ಷಿಸಿಡುವುದು. ಮೇಲಿನ ಪ್ರಸಂಗ ಹೊರತುಪಡಿಸಿ ತರಬೇತಿ ನಡೆಸುವ ಕಾಲೇಜಿನಲ್ಲಿ ಹಾಗೂ 100ಕ್ಕಿಂತ ಕಡಿಮೆ ವಿದ್ಯಾರ್ಥಿಗಳಿರುವ ಇತರೆ ಕೆಲವು ಕಾಲೇಜುಗಳಿಂದ ವಿದ್ಯಾರ್ಥಿಗಳನ್ನು ಸೇರಿಸಿಕೊಂಡು ಒಟ್ಟು 200ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿದ್ದರೆ ಹೆಚ್ಚುವರಿ ಬಯೋಮೇಟ್ರಿಕ್ ಯಂತ್ರಗಳನ್ನು ತರಬೇತಿ ಕೇಂದ್ರದ ಪ್ರಾಚಾರ್ಯರು ಸಂಬಂಧಿಸಿದ ಜಿಲ್ಲಾ ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ರವರ ಲಿಖಿತ ಅನುಮತಿ ಮೇರೆಗೆ KTPP ನಿಯಮಗಳ ಅನುಸಾರ ಕಾಲೇಜಿನ ಸಂಚಿತ ನಿಧಿಯಿಂದ ಖರೀದಿಸಿ, ದಾಸ್ತಾನಿಗೆ ಪಡೆದು, ತರಬೇತಿ ಕೇಂದ್ರದಲ್ಲಿ ಅಳವಡಿಸುವುದು ಹಾಗೂ ವಿದ್ಯಾರ್ಥಿಗಳ ಹಾಜರಾತಿಯನ್ನು ನಮೂದಿಸುವುದು.

2) **ಬಯೋಮೇಟ್ರಿಕ್ ತಂತ್ರಾಂಶ :-**

ಬಯೋಮೇಟ್ರಿಕ್ ಯಂತ್ರಕ್ಕೆ ಅನುಗುಣವಾಗಿ ನೂತನ ತಂತ್ರಾಂಶವನ್ನು ಇಲಾಖೆಯಿಂದಲೇ ಸಿದ್ಧಪಡಿಸಿ ಇಲಾಖಾ ವೆಬ್‌ನಲ್ಲಿ ಅಳವಡಿಸಲಾಗಿದ್ದು, ಡೌನ್ ಲೋಡ್ ಮಾಡಿಕೊಂಡು ಉಪಯೋಗಿಸುವುದು.

3) **ಗೌರವ ಸಂಭಾವನೆ ಹಾಗೂ ಸಾದಿಲ್ವಾರು ವೆಚ್ಚ .:-**

ಉಲ್ಲೇಖಿತ ಸುತ್ತೋಲೆಯಲ್ಲಿ ಈಗಾಗಲೇ ತಿಳಿಸಿರುವ ಹಾಗೆ ವಿಶೇಷ ತರಗತಿ ಕಾರ್ಯಕ್ರಮದಲ್ಲಿ ಭಾಗವಹಿಸುವ ವಿಷಯ ತಜ್ಞರಿಗೆ ಒಂದು ದಿನಕ್ಕೆ ಒಂದು ಅವಧಿಗೆ (90 ನಿಮಿಷಗಳ) ರೂ 500/-ಗಳ ಸಂಭಾವನೆಯನ್ನು ನೀಡಬಹುದಾಗಿದ್ದೆ ಹಾಗೂ ಪ್ರತಿ ನೋಡಲ್ ಕಾಲೇಜಿಗೆ ಸಾದಿಲ್ವಾರು ವೆಚ್ಚ ಮತ್ತು ಇತರೆ ಸಂಭಾವನೆಗಳನ್ನು ಈ ಕೆಳಗಿನ ಪಟ್ಟಿಯಲ್ಲಿ ತಿಳಿಸಿರುವಂತೆ ಬಯೋಮೇಟ್ರಿಕ್‌ನಲ್ಲಿ ಹಾಜರಾತಿಯ ಆಧಾರದ ಮೇಲೆ ನೀಡಲಾಗುವುದು.

| ಕ್ರಮ ಸಂಖ್ಯೆ | ವಿವರಗಳು | ನಿಗಧಿಪಡಿಸಿರುವ ಅನುದಾನ (ರೂಗಳಲ್ಲಿ) |
|---|---|---|
| 1 | ನೋಡಲ್ ಕಾಲೇಜಿನ ಪ್ರಾಚಾರ್ಯರಿಗೆ ಪ್ರತಿ ದಿನಕ್ಕೆ (ಆಂಗ್ಲ ಭಾಷಾ ವಿಷಯದ ತರಗತಿ ನಡೆಯುವ ಪ್ರತಿ ದಿನಕ್ಕೆ) ಸಂಭಾವನೆ | 250-00 |
| 2 | ವಿದ್ಯಾರ್ಥಿಗಳ ಹಾಜರಾತಿಯನ್ನು ಬಯೋಮೇಟ್ರಿಕ್ ನಿರ್ವಹಿಸುವ ಸಿಬ್ಬಂದಿ (200 ವಿದ್ಯಾರ್ಥಿಗಳಿಗೆ ಒಬ್ಬರಂತೆ) | 150-00 |
| 3 | 'ಡಿ'ಗ್ರೂಪ್ ನೌಕರರು (ಪ್ರತಿ ದಿನಕ್ಕೆ 100) | 100-00 |
| 4 | ಕುಡಿಯುವ ನೀರು ಒದಗಿಸಲು ಪೂರ್ಣ ಕಾರ್ಯಕ್ರಮಕ್ಕೆ | 2400-00 |
| 5 | ಶೌಚಾಲಯ ಸ್ವಚ್ಛತೆ ಮಾಡಿಸಲು ಪೂರ್ಣ ಕಾರ್ಯಕ್ರಮಕ್ಕೆ | 2400-00 |
| 6 | ಪರೀಕ್ಷಾ ಸಾಮಗ್ರಿಗಳ ಖರೀದಿಗಾಗಿ ಪೂರ್ಣ ಕಾರ್ಯಕ್ರಮಕ್ಕೆ | 5000-00 |
| 7 | ಇತರೆ ಸಾದಿಲ್ವಾರು ವೆಚ್ಚಗಳು ಪೂರ್ಣ ಕಾರ್ಯಕ್ರಮಕ್ಕೆ | 4500-00 |

4) **ವರದಿಗಳ ಸಲ್ಲಿಕೆ:-**

ಎಲ್ಲಾ ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ರವರು ತಮ್ಮ ಪ್ರತಿ ನೋಡಲ್ ಕಾಲೇಜಿನಲ್ಲಿ ಹಾಜರಾದ ವಿದ್ಯಾರ್ಥಿಗಳ ಮಾಹಿತಿಯನ್ನು ಬಯೋಮೇಟ್ರಿಕ್ ಯಂತ್ರದ ಆಧಾರದಲ್ಲಿ ಈ ಕೆಳಕಂಡ ಮಾದರಿಯಲ್ಲಿ ಕೂಡಲೇ ಇ-ಮೇಲ್ (vishwasakiran.pue@gmail.com) ಮೂಲಕ ತಮ್ಮ ಜಿಲ್ಲೆಯ ನೋಡಲ್ ಕೇಂದ್ರಗಳಿಂದ ಪಡೆದ ಮಾಹಿತಿಯನ್ನು ಕ್ರೋಢೀಕರಿಸಿ, ಸಲ್ಲಿಸುವುದು. ಯಾವುದೇ ಕಾರಣಕ್ಕೂ ನೋಡಲ್ ಕೇಂದ್ರದವರು ನೇರವಾಗಿ ಮಾಹಿತಿಯನ್ನು ಕೇಂದ್ರ ಕಛೇರಿಗೆ ಕಳುಹಿಸಬಾರದು.

| ಜಿಲ್ಲೆಯ ಹೆಸರು | | | | | | |
|---|---|---|---|---|---|---|
| ಕ್ರಮ ಸಂಖ್ಯೆ | ನೋಡಲ್ ಕಾಲೇಜಿನ ಹೆಸರು | ವಿದ್ಯಾರ್ಥಿಗಳ ಹಾಜರಾತಿ | | ಒಟ್ಟು | ಒಟ್ಟು ವಿಭಾಗಗಳು | ಹಾಜರಾದ ಉಪನ್ಯಾಸಕ ಸಂಖ್ಯೆ |
| | | ಪ್ರಥಮ ಪಿಯುಸಿ | ದ್ವಿತೀಯ ಪಿಯುಸಿ | | | |
| 1 | | | | | | |
| 2 | | | | | | |
| 3 | | | | | | |
| ಒಟ್ಟು | | | | | | |

28/9/15

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಗಳು:-

1. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ),ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು ಇವರಿಗೆ ಮಾಹಿತಿಗಾಗಿ.
2. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಮುಂದಿನ ಕ್ರಮಕ್ಕಾಗಿ
3. ನಿರ್ದೇಶಕರ ಆಪ್ತ ಶಾಖೆ ಪದವಿ ಪೂರ್ವ ಶಿಕ್ಷಣ ಇಲಾಖೆ, ಮಾಹಿತಿಗಾಗಿ
4. ಲೆಕ್ಕ ಪತ್ರಾಧಿಕಾರಿಗಳು, ಪದವಿ ಪೂರ್ವ ಶಿಕ್ಷಣ ಇಲಾಖೆ, ಮುಂದಿನ ಸೂಕ್ತ ಕ್ರಮಕ್ಕಾಗಿ.
5. ಇ-ಆಡಳಿತ ಶಾಖೆ ಪದವಿ ಪೂರ್ವ ಶಿಕ್ಷಣ ಇಲಾಖೆ, ವೆಬ್‌ಸೈಟ್‌ನಲ್ಲಿ ಅಳವಡಿಸಲು ಮುಂದಿನ ಕ್ರಮಕ್ಕಾಗಿ.
6. ಕಛೇರಿ ಪ್ರತಿ.